DFA/1078523

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 968
ಸದಸ್ಯರ ಹೆಸರು : ಶ್ರೀ ಗೋವಿಂದರಾಜು,
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 24.02.2023

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ಸಿಗಾಗಿ ಬರುವಂತ ಜನರನ್ನು ರಾತ್ರಿ 8 ಗಂಟೆ ನಂತರ ಖಾಸಗಿ ಬಸ್ಸುಗಳ ದಲ್ಲಾಳಿಗಳು ಪ್ರಯಾಣಿಕರನ್ನು ಅಡ್ಡಗಟ್ಟಿ ತಮ್ಮ ವಾಹನಗಳಲ್ಲಿ ಕರೆದೊಯ್ಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿದೆ. |
| ಆ | ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ: ಎಷ್ಟು ಬಸ್ಸುಗಳನ್ನು ಸೀಜ್ ಮಾಡಲಾಗಿದೆ: ಇದಕ್ಕೆ ಸರ್ಕಾರದ ಅನುಮತಿ ಇದೆಯೇ; | ಕೆಂಪೇಗೌಡ ಬಸ್ ನಿಲ್ದಾಣದಲ್ಲಿನ ಭದ್ರತಾ ಸಿಬ್ಬಂದಿಗಳು ಬಸ್ ನಿಲ್ದಾಣ ಪ್ರವೇಶಿಸಿ ಪ್ರಯಾಣಿಕರನ್ನು ಕರೆದೊಯ್ಯುವ ಖಾಸಗಿ ಬಸ್ಸುಗಳ ಟ್ರಾವಲ್ಸ್ ಏಜೆಂಟ್‌ರುಗಳನ್ನು ಹಿಡಿದು ನಿಲ್ದಾಣದಲ್ಲಿರುವ ಉಪ್ಪಾರಪೇಟೆ ಪೊಲೀಸ್ ಹೊರ ಠಾಣೆಗೆ ಒಪ್ಪಿಸಿರುತ್ತಾರೆ. ಹೀಗೆ ಜನವರಿ-2022 ರಿಂದ ಜನವರಿ-2023 ರವರೆಗೆ ಒಟ್ಟು 516 ಖಾಸಗಿ ಏಜೆಂಟರುಗಳನ್ನು ಹಿಡಿದು ಪೊಲೀಸ್ ಹೊರಠಾಣೆಗೆ ಒಪ್ಪಿಸಲಾಗಿದೆ.<br>ಖಾಸಗಿ ಬಸ್ಸುಗಳನ್ನು ಸೀಜ್ ಮಾಡುವ ಅಧಿಕಾರವು ನಿಗಮದ ವ್ಯಾಪ್ತಿಗೆ ಒಳಪಡುವುದಿಲ್ಲ. |
| ಇ | ಇದರಿಂದ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಗೆ ನಷ್ಟವುಂಟಾಗುವುದಿಲ್ಲವೇ: ಬಸ್ಸು ಸ್ಟ್ಯಾಂಡ್ ಸುತ್ತಲು ಬೆಳಗ್ಗೆಯಿಂದ ರಾತ್ರಿಯವರೆಗೂ ಬಸ್ಸುಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಕೆ.ಎಸ್.ಆರ್.ಟಿ.ಸಿ. ಬಿ.ಎಂ.ಟಿ.ಸಿ. ಮತ್ತು ಸಾರ್ವಜನಿಕರ ಸುಗಮ ಸಂಚಾರಕ್ಕೆ | ಕೆಂಪೇಗೌಡ ಬಸ್ ನಷ್ಟ ಉಂಟಾಗುತ್ತಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆ. |

ಬಸ್‌ಗಳು ನಿಲುಗಡೆ ಮಾಡ್ರದಂತೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ. ನಿಲುಗಡೆ ಮಾಡುವ ವಾಹನಗಳಿಗೆ ಪ್ರಕರಣ ದಾಖಲಿಸಿ ದಂಡವನ್ನು ಹಾಕಲಾಗುತ್ತಿದೆ.

ಕಳೆದ 03 ವರ್ಷಗಳಲ್ಲಿ ಮೆಜೆಸ್ಟಿಕ್ ಸುತ್ತಮುತ್ತ ನಿಯಮ ಮೀರಿ ಬರುವಂತಹ ವಾಹನಗಳ ಮೇಲೆ ದಾಖಲಿಸಿರುವ ಪ್ರಕರಣಗಳು ಮತ್ತು ಸಂಗ್ರಹಿಸಲಾದ ದಂಡದ ಮೊತ್ತದ ವಿವರ ಕೆಳಗಿನಂತಿರುತ್ತದೆ:

| ವರ್ಷ | ಪ್ರಕರಣಗಳ ಸಂಖ್ಯೆ | ದಂಡದ ಮೊತ್ತ |
|---|---|---|
| 2020 | 106 | 53000 |
| 2021 | 151 | 75500 |
| 2022 | 73 | 36500 |

ಬೆಂ.ಮ.ಸಾ.ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣದ ಬಳಿ ಸಾರಥಿ ಗಸ್ತು ಪಡೆಯ ಸಂಚಾರ ಸಿಬ್ಬಂದಿಯನ್ನು ನಿಯೋಜಿಸಿದ್ದು, ಕೆಂ.ಬ.ನಿಲ್ದಾಣದ ಸುತ್ತಲು ಖಾಸಗಿ ಬಸ್ಸುಗಳು/ ವಾಹನಗಳನ್ನು ನಿಲ್ಲಿಸುವುದನ್ನು ತೆರವುಗೊಳಿಸಿ, ಸಂಸ್ಥೆಯ ವಾಹನಗಳ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಡಚಣೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಟಿಡಿ 55 ಟಿಸಿಕ್ಯೂ 2023

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



Generated from eOffice by B SREERAMULU, TD-MIN(SS), TRANSPORT MINISTER, Trans on 24/02/2023 03:14 PM